ಕರ್ನಾಟಕ ವಿಧಾನ ಸಭೆ

571 ಶ್ರೀ ನರೇಂದ್ರ ಬಾಬು ನೆ.ಲ (ಮಹಾಲಕ್ಷ್ಮಿ ಲೇಔಟ್)

ಮಾನ್ಯ ಮುಖ್ಯಮಂತ್ರಿಗಳು

ಅ) ಬಂಡೀಪುರ ಅರಣ್ಯದಲ್ಲಿ ರಸ್ತೆ ಅಗಲೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

– ಇಲ್ಲ –

ಆ) ಹಾಗಿದ್ದಲ್ಲಿ, ಎಷ್ಟು ವಿಸ್ತೀರ್ಣದ ರಸ್ತೆ ಅಗಲೀಕರಣ ಮಾಡಲಾಗುವುದು; (ವಿವರ ನೀಡುವುದು);

– ಅನ್ವಯಿಸುವುದಿಲ್ಲ –

ಇ) ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ರೈಲ್ವೆ ಮಾರ್ಗ ನಿರ್ಮಾಣದ ಪ್ರಸ್ತಾಪ ಕರ್ನಾಟಕ ಅಥವಾ ತಮಿಳುನಾಡು ಸರ್ಕಾರದಿಂದ ಕೇಂದ್ರ ಸರ್ಕಾರದ ಮುಂದಿದೆಯೇ;

– ಇಲ್ಲ –

ಈ) ಇದರಿಂದಾಗಿ ವನ್ಯಜೀವಿಗಳಿಗೆ ತೊಂದರೆ ಆಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

– ಅನ್ವಯಿಸುವುದಿಲ್ಲ –

ಕರ್ನಾಟಕ ವಿಧಾನ ಸಭೆ

13ನೇ ವಿಧಾನಸಭೆ

3ನೇ ಅಧಿವೇಶನ

575 ಶ್ರೀ ಜಯಚಂದ್ರ ಟಿ.ಬಿ. (ಶಿರಾ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯಲ್ಲಿ ಕೇಶಿಪ್ ಸಂಸ್ಥೆಯಡಿಯಲ್ಲಿ 2ನೇ ಹಂತದ ಯೋಜನೆಗೆ ವಿವಿಧ ನೆರವುಗಳನ್ನೊಳಗೊಂಡ ಫಂಡಿಂಗ್ ಸ್ಟ್ರಕ್ಚರ್ ಬಗ್ಗೆ ಮಾಹಿತಿ ಒದಗಿಸುವುದು; ಮಂಜೂರಾದ ಕಾಮಗಾರಿಗಳು ಯಾವುವು ಹಾಗೂ ಪ್ರಿಯಾರಿಟಿ ಮಾಡುವಲ್ಲಿ ಅನುಸರಿಸಲಾಗಿರುವ ಮಾನದಂಡಗಳೇನು; ಪ್ರಿಯಾರಿಟಿ ಪಟ್ಟಿಯನ್ನು ಒದಗಿಸುವುದು;

ಕೆಶಿಪ್–2 ರ ಯೋಜನೆಯಡಿ ರಸ್ತೆಗಳ ಅಭಿವೃದ್ಧಿಗೆ, ಭಾರಿ ಮೊತ್ತದ ಆರ್ಥಿಕ ಬೇಡಿಕೆಯ ಪೂರೈಕೆಗಾಗಿ ಸರ್ಕಾರವು ವಿವಿಧ ವಿತ್ತೀಯ ಸಂಸ್ಥೆಗಳ ಆಯ್ಕೆಗಳಾದ ವಿಶ್ವ ಬ್ಯಾಂಕ್, ಏಷಿಯನ್ ಅಭಿವೃದ್ಧಿ ಬ್ಯಾಂಕ್‌ಗಳ ಬಾಹ್ಯ ನೆರವು, ದೇಶಿಯ ವಿತ್ತ ಸಂಸ್ಥೆಗಳಿಂದ ಸಾಲ ಮತ್ತು ಖಾಸಗಿ ಸಹಭಾಗಿತ್ವ ಮುಂತಾದವುಗಳ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಇದರಲ್ಲಿ ವಿಶ್ವ ಬ್ಯಾಂಕ್ 300 ಮಿಲಿಯನ್ ಯು.ಎಸ್.ಡಾಲರ್ (ರೂ. 1500 ಕೋಟಿ) ಗಳ ಸ್ಥಾಲದ ನೆರವು ನೀಡಲು ತಾತ್ವಿಕವಾಗಿ ಒಪ್ಪಿದೆ. ಕೆಶಿಪ್–2 ಅಡಿಯಲ್ಲಿ ರಸ್ತೆಗಳನ್ನು ವಿಶ್ವ

ಬ್ಯಾಂಕ್ ಮಾರ್ಗಸೂಚಿ ಅನುಸಾರ ಅಧ್ಯಯನಗಳ ಮೂಲಕ ಆಯ್ಕೆ ಮಾಡಲಾಗಿದೆ. ರಸ್ತೆಗಳ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮೂಲತಃ ಮಂಜೂರಾದ ಪಟ್ಟಿಯು ಪರಿಷ್ಕರಣೆಗೊಳಪಟ್ಟಿದೆಯೇ; ಇದಕ್ಕೆ ಕಾರಣಗಳೇನು; ಇದರಿಂದ ಪ್ರಿಯಾರಿಟಿಗಾಗಿ ಅನುಸರಿಸಲಾದ ಮಾನದಂಡಗಳನ್ನು ಉಲ್ಲಂಘಿಸಿದಂತಾಗಲಿಲ್ಲವೇ; ಇದಕ್ಕೆ ವಿಶ್ವಬ್ಯಾಂಕಿನ ಸಹಮತಿ ದೊರಕಿದೆಯೇ;

ಮೂಲತಃ ಕೆಶಿಫ್-2ರ ಅಡಿಯಲ್ಲಿ 3411 ಕಿ.ಮೀ. ರಸ್ತೆಗಳನ್ನು ಆಯ್ಕೆ ಮಾಡಲಾಗಿದ್ದು ಇದರಲ್ಲಿ ಯಾವುದೇ ಮಾರ್ಪಾಡು ಮಾಡಿರುವುದಿಲ್ಲ.

ಇ) ಪ್ರಸ್ತುತ ಯೋಜನೆಗೆ 2008-09ನೇ ಸಾಲಿನಲ್ಲಿ ಫಂಡಿಂಗ್ ಸ್ಟ್ರಕ್ಚರ್ ಅನ್ವಯ ನಿಗಧಿಪಡಿಸಲಾದ ಅನುದಾನವೆಷ್ಟು; (ವಿವರಗಳನ್ನು ಒದಗಿಸುವುದು);

ಈ) ಮಾರ್ಚ್ 2009ರ ಅಂತ್ಯಕ್ಕೆ ಈ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿದೆಯೇ;

2008-09ರ ಸಾಲಿನಲ್ಲಿ ಯೋಜನೆಗೆ 150 ಕೋಟಿಗಳ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದ್ದು, ಇದರಲ್ಲಿ ಮಾರ್ಚ್, 2009 ರ ಅಂತ್ಯಕ್ಕೆ ರೂ.13 ಕೋಟಿ ವೆಚ್ಚ ಮಾಡಲಾಗಿದೆ. ಈ ವೆಚ್ಚವನ್ನು ರಸ್ತೆಗಳಲ್ಲಿ ಬರುವ ಸಾರ್ವಜನಿಕ ಆಸ್ತಿಗಳ ಸ್ಥಳಾಂತರ ಕೆಲಸಗಳಿಗೆ ಬಳಸಲಾಗಿದೆ.

ಉ) ಬಳಕೆಯಾಗದೆ ಲ್ಯಾಪ್ಸ್ ಆಗಿದ್ದಲ್ಲಿ, ಮೊತ್ತದ ವಿವರಗಳು ಹಾಗೂ ಇದಕ್ಕೆ ಜವಾಬ್ದಾರರು ಹಾಗೂ ಅವರುಗಳ ಮೇಲೆ ತೆಗೆದುಕೊಂಡ ಶಿಸ್ತು ಕ್ರಮಗಳೇನು?

ವಿಶ್ವ ಬ್ಯಾಂಕ್‌ನೊಂದಿಗೆ ಕರಾರು ಮಾಡಿಕೊಂಡ ನಂತರ ಹಾಗೂ ಮುಂದಿನ ಕ್ರಮಗಳಿಗೆ ವಿಶ್ವ ಬ್ಯಾಂಕ್ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಹಾಲಿ ಯೋಜನೆಯ ಪೂರ್ವ ನಿರ್ಮಾಣ ಕೆಲಸಗಳಾದ ಭೂಸ್ವಾಧೀನ, ಮರಗಳ ತೆರವು, ಪರಿಸರ ಸಂಬಂಧಿತ ಪರವಾನಗಿ ಹಾಗೂ ಸಾರ್ವಜನಿಕ ಆಸ್ತಿಗಳ ಸ್ಥಳಾಂತರ ಮುಂತಾದ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ. ಯೋಜನಾ ಅನುಷ್ಠಾನ ಪ್ರಕ್ರಿಯೆಗಳು ಪ್ರಾರಂಭಗೊಳ್ಳಲು ಹೆಚ್ಚಿನ ಕಾಲಾವಕಾಶದ ಅಗತ್ಯವಿರುವುದರಿಂದ 2008-09ರ ಅನುದಾನವನ್ನು ಪೂರ್ಣವಾಗಿ ಬಳಸುವುದು ಸಾಧ್ಯವಾಗಿರುವುದಿಲ್ಲ.

Annexure-1

Enclosure to GO No. PWD 61 EAP 2006 Bangalore Dated: 25-11-2006

List of Selected roads for Improvements under KSHIP-II		
SL No	**Name of the roads**	**Length (Kms)**
01	Tinthnl-Devadurga-Kalmala	74
02	Kushtagi (NH-13) – Tawargera – Sindhanur	64
03	Managoli – Talikota – Devapur	110
04	Mudgal – Kudithini (NH-63)	115
05	Konananur – Hunsur – HD Kote	89
06	Sira – AP Border via Madhugiri – Gowribidanur – Chikballapura – Chintamani	210

	– Srinivasapura – Mulbagal	
07	Haliyal – Kudalasangama via Dharwad – Soundatti – Ramdurga – Badami – Pattadakal – Kamatgi – NH13	243
08	Hassan – Periyapatna via Arakalagud – Ramanathpura	77
09	Hirekerur – Ranebennur (on NH-4)	58
10	Kudachi – Kabbur – Ghataprabha	50
11	Shikaripura – Anandapuram (on NII-206)	32
12	Kotumachigi – Gajendragarh	32
13	Goa Border – Soundatti via Khanapur – Bagewadi – Bailhongal	133
14	Mudhol – Nippani via Mahalingapur – Kabbur	104
15	Belur – Kodlipet via Bikkodu – Vatchole – Alur – Magge	72
16	Davanagere – Birur via Channagiri	104
17	Gangamula – Kottigehara	63
18	Hangal – Haveri (NH-4)	32
19	TN Border (Hunasanahalli) – AP Border via Kanakapura – Ramanagara – Magadi – Dobbespet – Koratagere – Madhurgiri – Pavagada	220
20	Hole Narsipura to K.R.Nagar via Saligarama	46
21	Shelavadi – Harapanahalli via Gadag – Mundarigi	112
22	Indi – Zalaki (on NH-13)	20
23	Maharastra Border – Gulbarga via Afzalpur	99
24	Hungund – Talikot via Muddebihal	58
25	Gubbi – Mandya via Yediyur – Kowdle	109
26	Jagalur – NH-13	10
27	Hoskote – AP Border via Chintamani	88
28	Belthangadi to Bantwal (on NH-48)	35
29	Ramanagaram – Saligrama via Thalavadi – Choulanakuppe – Huliyurdurga – Nagamangala – K.R.Pet Akkihebbal – Berya.	142
30	Malavalli – Koratagere via Maddur – Kunigal – Tumkur	135

31	Shimoga – Tadasa on NH-4 via Savalanga via Shikaripura-Shiralakoppa – Togarsi – Anvatti – Gondi – Hangal	171
32	Jamkhandi – Maharastra Border via Teradal – Kudachi – Managasuli	79
33	Horanadu – Subramanaya via Kalasa – Kottigehara – Mudigere – Sakalehpura Junction – Vanagur	164
34	Molkalmur to SH 19 (KSHIP 1 Road)	6
35	Bidar – Chincholi via Ekhelli (NH9)	61
36	Padubidri – Karkala	28
37	Kollegala – Tamilnadu Boarder via Hanur – MM Hills	97
38	Virajpet – Somawarpet via Madikere	71
Total Length (Kms)		**3,411**

ಕರ್ನಾಟಕ ವಿಧಾನ ಸಭೆ

576 ಶ್ರೀ ಜಯಚಂದ್ರ ಟಿ.ಬಿ.

ಪ್ರವಾಸೋದ್ಯಮ ಮತ್ತುಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಪ್ರವಾಸೋದ್ಯಮ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳು.

ಅ) ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಇಲಾಖೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ವಿವಿಧ ಯೋಜನೆಗಳು ಯಾವುವು; ಆ ಯೋಜನೆಗಳಿಗೆ ಕಾಯ್ದಿರಿಸಿದ ಅನುದಾನವೆಷ್ಟು; ಈ ಯೋಜನೆಗಳಿಂದ ಕೈಗೊಂಡ ಕಾಮಗಾರಿಗಳು ಯಾವುವು ಹಾಗೂ ಅವುಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು;(ಜಿಲ್ಲಾವಾರು ವಿವರ ನೀಡುವುದು);

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಅಂಗವಾಗಿ ಹಮ್ಮಿಕೊಳ್ಳುತ್ತಿರುವ ಯೋಜನೆಗಳ ಪೈಕಿ ಈ ಕೆಳಕಂಡ ಕಾಮಗಾರಿಗಳ ಚಾಲ್ತಿಯಲ್ಲಿವೆ.

01. ಪ್ರವಾಸಿ ತಾಣಗಳಲ್ಲಿ ವಸತಿ ಸೌಕರ್ಯ ನಿರ್ಮಾಣ.
02. ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ನಿರ್ಮಾಣ.
03. ಸ್ಮಾರಕಗಳಿಗೆ ಹೊನಲು ಬೆಳಕು.
04. ಧ್ವನಿ ಮತ್ತು ಬೆಳಕಿನ ಯೋಜನೆ.
05. ಪರಿಸರ ಪ್ರವಾಸೋದ್ಯಮ ಯೋಜನೆಗಳು.
06. ಪ್ರವಾಸಿ ತಾಣಗಳಿಗೆ ಸೇರುವ ಕೂಡುರಸ್ತೆಗಳ ಅಭಿವೃದ್ಧಿ.
07. ರಾಜ್ಯದಲ್ಲಿರುವ ಪ್ರಮುಖ ಪ್ರವಾಸಿ ತಾಣಗಳ ಬಳಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಪ್ರಚಾರ.